ಶ್ರೀಮಂತಿಕೆಯಾಗಲಿ, ಬಸಪ್ಪನ ನಿರಂತರ ಸೇವೆಯ ಅಗತ್ಯವಾಗಲಿ ಜಯಂತನಿಗೆ ಇರಲಿಲ್ಲ.

ಆದರೆ ಬಸಪ್ಪ ಮಾತ್ರ ಜಯಂತನೂ ತನ್ನ ಹಾಗೆಯೇ ಪತ್ನಿಯನ್ನು ಕಳೆದುಕೊಂಡ ಸಮಾನ ವಿರಹಿಯಾದ ಕಾರಣ ತನ್ನ ಹೆಂಡತಿಯ ಕುರಿತಾದ ಸುದ್ದಿಗಳನ್ನು ಜಯಂತನ ಬಳಿ ಹೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳುತ್ತಿದ್ದ.

ಅವನ ಊರಿನವನಾದ ಯೆಲ್ಲಪ್ಪ ಎಂಬವನು ಮಂಚದ ಬೈಲಿಗೆ ವಲಸೆ ಬಂದಿದ್ದ ಕೂಲಿಕಾರ ಕುಟುಂಬಗಳ ಜತೆಗೆ ವಾಸವಾಗಿದ್ದ. ಅವನಿಗೆ ಬಸಪ್ಪನ ಹೆಂಡತಿ ಚೆನ್ನಮ್ಮನ ಪರಿಚಯ ಇದೆಯಂತೆ.



ಊರಿಗೆ ಹಬ್ಬಜಾತ್ರೆಗಳಿಗೆ ಹೋದಾಗ ಅವಳು ಒಮ್ಮೊಮ್ಮೆ ಕಾಣಸಿಗುತ್ತಾಳಂತೆ. ಚೆನ್ನಮ್ಮ ತನ್ನನ್ನು ತೊರೆದುಹೋದಮೇಲೆ ಊರಿಗೆ ಹೋಗದೆ ಮಂಚದಬೈಲಿನಲ್ಲಿಯೇ ಕಾಯಕಯೋಗಿಯಾಗಿ ಬದುಕುತ್ತಿದ್ದ ಬಸಪ್ಪನಿಗೆ ಚೆನ್ನಮ್ಮನ ಸುದ್ದಿ ಕೇಳಲು ಆಸೆಯಿದ್ದುದು ವಿಚಿತ್ರವೇ ಸರಿ. ಯೆಲ್ಲಪ್ಪನಿಂದ ಚೆನ್ನಮ್ಮನ ಸುದ್ದಿಯನ್ನು ಕೇಳಲು, ಅದನ್ನು ಮತ್ತೆ ಮತ್ತೆ ಚರ್ಚಿಸಲು ಬಸಪ್ಪ ಸದಾ ಅವನ ಸಾಂಗತ್ಯವನ್ನು ಬಯಸಿಕೊಂಡು, ಅವನನ್ನು ಹುಡುಕಿಕೊಂಡು ಹೋಗುತ್ತಿದ್ದ. ಜಯಂತನ ಮನೆಗೆ ಹೆಚ್ಚುವರಿ ಕೂಲಿಯವರು ಬೇಕಾದಾಗಲೆಲ್ಲ ಬಸಪ್ಪ, ಯೆಲ್ಲಪ್ಪನನ್ನೇ ಕರೆದುಕೊಂಡು ಬರುತ್ತಿದ್ದ.

ಯೆಲ್ಲಪ್ಪ ಜಾಣ ಎನ್ನುವುದನ್ನು ಜಯಂತ ಊಹಿಸಿದ್ದ. ಚೆನ್ನಮ್ಮ ತಾನು ಕಟ್ಟಿಕೊಂಡಿದ್ದ ಸಂಗಪ್ಪನ ಜತೆಗೆ ಸುಖವಾಗಿಲ್ಲ ಎಂಬ ಸುದ್ದಿಯನ್ನು ಬಹುವಿಧಗಳಲ್ಲಿ ತಿರುಚಿ ಬಸಪ್ಪನಿಗೆ ಹೇಳುತ್ತಾ ಅವನಿಂದ ಶರಾಬು ಅಥವಾ ಬೆಳಗಿನ ಉಪಾಹಾರವನ್ನು ಗಿಟ್ಟಿಸುತ್ತಿದ್ದನೆನ್ನುವುದು ಯಾರಿಗಾದರೂ ಅರಿವಾಗುತ್ತಿತ್ತು. ಆದರೆ ಬೇರೆಲ್ಲ ವಿಷಯಗಳಲ್ಲಿ ವಿವೇಕಿಯಂತೆ ಕಾಣಿಸುತ್ತಿದ್ದ ಬಸಪ್ಪ ಪತ್ನಿಯ ಬಗ್ಗೆ ಸಹಜವಾಗಿ ಯೋಚಿಸಲಾರದ ಹಂತಕ್ಕೆ ತಲುಪಿದ್ದ ಅನಿಸುತ್ತಿತ್ತು. ಹಾಗಾಗಿ ಅವಳ ಬಗ್ಗೆ ಕಥೆಗಳನ್ನು ಹೇಳುತ್ತಿದ್ದ ಯೆಲ್ಲಪ್ಪನನ್ನು ಪೂರ್ತಿಯಾಗಿ ನಂಬಿಬಿಟ್ಟಿದ್ದ.

ಜತೆಗೆ ಯೆಲ್ಲಪ್ಪ ತಾನು ಊರಿಗೆ ಹೋದಾಗಲೆಲ್ಲ ಚೆನ್ನಮ್ಮನ ಮನಸ್ಸನ್ನು ಬಸಪ್ಪನ ಬಳಿಗೆ ಹಿಂದಿರುಗುವುದಕ್ಕೆ ಒಲಿಸಲು ಪ್ರಯತ್ನಿಸುತ್ತೇನೆಂದು ಬಸಪ್ಪನನ್ನು ನಂಬಿಸಿದ್ದ. ಯೆಲ್ಲಪ್ಪ ಚೆನ್ನಮ್ಮನಿಗೆ ಹೀಗೆ ಹೇಳುತ್ತಿದ್ದನಂತೆ: ಬಸಪ್ಪ ಇನ್ನೂ ಕೂಡ ಯುವಕನ ಹಾಗಿದ್ದಾನೆ; ಯಾವ ಕುಡಿತ ಗಿಡಿತ ಇತ್ಯಾದಿ ಚಟಗಳಿಲ್ಲದೆ ಸುಖವಾಗಿದ್ದಾನೆ; ಅವನ ಬಳಿಗೆ ಹಿಂದಿರುಗು – ಎಂದು ಹೇಳುತ್ತಿದ್ದನಂತೆ.

ಯೆಲ್ಲಪ್ಪನನ್ನು ನಂಬುವ ವಿಷಯವನ್ನು ಬಿಟ್ಟರೆ ಬಸಪ್ಪನ ಲೋಕಾನುಭವ ಮತ್ತು ಜೀವನಾನುಭವಗಳು ದೊಡ್ಡದಾಗಿವೆ ಎಂದು ಜಯಂತನೂ ನಂಬಿದ್ದ. ಎಲ್ಲ ವಿಷಯಗಳಲ್ಲಿಯೂ ಬಸಪ್ಪನಿಗೆ ಅನುಭವವಿತ್ತು ಎಂದು ತನ್ನ ತೋಟವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಅವನಿಗೇ ಬಿಟ್ಟಿದ್ದ. ಬಸಪ್ಪ ತನಗೆ ಬೇಕಾದಂತೆ, ತನಗೆ ಬೇಕಾದ ಸಮಯದಲ್ಲಿ ಜಯಂತನ ತೋಟಕ್ಕೆ ಗೊಬ್ಬರ ಇತ್ಯಾದಿಗಳನ್ನು ತಂದು ಹಾಕುತ್ತಿದ್ದ.

ಒಮ್ಮೊಮ್ಮೆ ಅವನು ಆಗಸ್ಟ್ ತಿಂಗಳಿಗೆ ಬಂದು, 'ದಣಿಯೋರೇ, ನಿಮ್ಮ ತೆಂಗಿನ ಮರಗಳ ಬುಡ ಬಿಡಿಸೋಣ... ಈಗಾಗಲೇ ತಡವಾಗಿದೆ' ಎಂದು ಆ ಕೆಲಸವನ್ನು ಮಾಡಲಾರಂಭಿಸುತ್ತಿದ್ದ. ಹೆಚ್ಚು